ನಂ. 1876.—ರೆ. 707, ಮೈಸೂರ್ ಸರ್ವಿಸ್ ರೆಗ್ಯುಲೇಷ್ಣಗಳ 188ನೇ ಸೆಕ್ಷನ್ ಅನುಸರಿಸಿ, ನಾಗಮಂಗಲ ತಾಲ್ಲೂಕು ಅಮಲ್ದಾರ್ ಖಾದರ್‌ಅಲ್ಲಿಯವರಿಗೆ 1896ನೇ ಜುಲೈ 1ನೇ ಮಂಗಳವಾರ ಲಾಗಾಯತು 2 ತಿಂಗಳೂ 24 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ. ಹಾಲಿ ಕೊಟ್ಟಿರುವ ರಜಾ ಪೂರೈಸಿದ ತರುವಾಯ ಸದರೀ ಯವರು ಸೆಕ್ಷನ್ ಮೇಲೆ ತಮ್ಮ ಕೆಲದಿಂದ ನಿವೃತ್ತರಾಗತಕ್ಕದ್ದು.

ತಾರೀಖು 19ನೇ ಆಗಸ್ಟ್ 1896.

ನಂ. 1972.—ರೆ. ಫೈ. 104.—95, ಮೈಸೂರ್ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ತುಮಕೂರು ತಾಲ್ಲೂಕು ಅಮಲ್ದಾರ್ ಮಹಮ್ಮದ್ ರಜಾಯವರಿಗೆ, 1896ನೇ ಆಗಸ್ಟ್ 15ನೇ ಮಂಗಳವಿನಲ್ಲಿ ಒಂದು ದಿನದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ. 1975.—ರೆ. ಫೈ. 14.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ದೊಡ್ಡಬಳ್ಳಾಪುರದ ತಾಲ್ಲೂಕಿನ ಅಮಲ್ದಾರ್ ಎಸ್. ಗೋಪಾಲಯ್ಯಂಗಾರ್ಯರಿಗೆ 1896ನೇ ಆಗಸ್ಟ್ 10ನೇ ತಾರೀಖು ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾಲ್ಲೂಕು ಶಿರಸ್ತೇದಾರ್ರು ಸದರೀ ಅಮಲ್ದಾರ್ರು ರಜಾದಮೇಲಿರುವಲ್ಲಿ ತಾಲ್ಲೂಕಿನ ಚಾಲ್ತೀ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ನಂ. 1978.—ರೆ. ಫೈ. 26.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಣಗಳ 172ನೇ ಆರ್ಟಿಕಲ್ ಅನುಸರಿಸಿ, ಹುಳಿಯಾರದ ಸಬ್ ತಾಲ್ಲೂಕಿನ ಡೆಪ್ಯೂಟಿ ಅಮಲ್ದಾರ್ ಬಿ. ಸಿ. ಕೇಶವಯ್ಯನವರಿಗೆ, 1896ನೇ ಆಗಸ್ಟ್ 12ನೇ ಮಂಗಳವಾರ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ ಒಂದು ವಾರದ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕು ಅಮಲ್ದಾರ್ರು, ತಮ್ಮ ಕೆಲಸಗಳೊಂದಿಗೆ ಸದರೀ ಡೆಪ್ಯೂಟಿ ಅಮಲ್ದಾರ್ರು ರಜಾದಮೇಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಹುಳಿಯಾರದ ಸಬ್ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ನಂ. 1981.—ರೆ. ಫೈ. 25.—96, ಮೈಸೂರ್ ಸರ್ವಿಸ್ ರೆಗ್ಯುಲೇಷ್ಣಗಳ 171ನೇ ಆರ್ಟಿಕಲ್ ಅನುಸರಿಸಿ, ಜೆಗ್ಗಡದೇವನ ಕೋಟೆ ತಾಲ್ಲೂಕು ಅಮಲ್ದಾರ್ ಕೃಷ್ಣಶೆಟ್ಟಿ ಯವರಿಗೆ, 1896ನೇ ಆಗಸ್ಟ್ 12ನೇ ಮಂಗಳವಾರ ಲಾಗಾಯತು ಐದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

2. ತಾಲ್ಲೂಕು ಶಿರಸ್ತೇದಾರ್ರು ಸದರೀ ಅಮಲ್ದಾರ್ರು ರಜಾದಮೇಲಿರುವಲ್ಲಿ ತಾಲ್ಲೂಕಿನ ಚಾಲ್ತೀ ಕೆಲಸಗಳ ಚಾರ್ಜಿನಲ್ಲಿರತಕ್ಕದ್ದು.

ನಂ. 1893.—ಫಾ. ಫೈ. 27.—95, ಮೂರನೇ ಕ್ಯಾಸಿನ ಫಾರೆಸ್ಟ್‌ಗಳ ಅಸಿಸ್ಟೆಂಟ್ ಕ್ವಸರ್‌ವೇಟರ್ ಮೆಸ್ಟರ್ ಬಿ. ಶ್ರೀನಿವಾಸರಾಯರಿಗೆ 1896ನೇ ಏಪ್ರಿಲ್ 12ನೇ ಮಂಗಳವಾರ ಲಾಗಾಯತು ಕಾಹಿಲೇ ರಜಾ ಕೊಡಲ್ಪಟ್ಟಿರುವದರಿಂದ ಈ ಕೆಳಗೆ ಕಂಡ ಹಂಗಾಮಿ ಬಡ್ತಿಗಳು ಮೇಲೆ ಹೇಳಲ್ಪಟ್ಟ ತಾರೀಖು ಲಾಗಾಯತು ಹುಕುಂ ಮಾಡಲ್ಪಟ್ಟಿರುತವೆ:—

ಯಕ್ಸ್‌ಟ್ರ ಅಸಿಸ್ಟೆಂಟ್ ಕ್ವಸರ್‌ವೇಟರ್ ಮೆಸ್ಟರ್ ಜೆ. ಜೆ. ಮಾಣ್ಟೇರೋ ಯವರು 3ನೇ ಕ್ಯಾಸಿನ ಫಾರೆಸ್ಟ್‌ಗಳ ಅಸಿಸ್ಟೆಂಟ್ ಕ್ವಸರ್ವೇಟರಾಗಿ ಆಕ್ಟಿಂಗ್ ತರೀಕ್ ಇರತಕ್ಕದ್ದು.

ಎರಡನೇ ಗ್ರೇಡಿನ ರೇಂಜರ್ ಮೆಸ್ಟರ್ ಎಂ. ಶ್ರೀನಿವಾಸರಾಯರು ಯಕ್ಸ್‌ಟ್ರ ಅಸಿಸ್ಟೆಂಟ್ ಕ್ವಸರ್ವೇಟರಾಗಿ ಆಕ್ಟಿಂಗ್ ತರೀಕ್ ಇರತಕ್ಕದ್ದು.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್, ಜನರಲ್ ಪ ರೆವಿನ್ಯೂ
ಇಲಾಖೆಗಳ ಗವರ್ಮೆಂಟ್ ಸೆಕ್ರೆಟರಿ.

ಪಬ್ಲಿಕ್‌ವರ್ಕ್ಸ್.

ಇನ್ಸ್‌ಪೆಕ್ಷನಾಮಾ.

ತಾರೀಖು 20ನೇ ಆಗಸ್ಟ್ 1896.

ನಂ. 763.–4389, ಸ್ಯಾನಿಟರಿ ಇಂಜಿನಿಯರ ಸರ್ಕಲಿಗೆ ಸೇರಿದ ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಟರ್ ಟಿ. ವಿ. ನಾರಿಸ್‌ಯವರಿಗೆ 1896ನೇ ಜೂನ್ 22ನೇ ಮಂಗಳವಾರ ಲಾಗಾಯತು 51 ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೇ ಆಗಸ್ಟ್ 1896.

ನಂ. 765.—4418, ಹಾಸನ ಡಿವಿಜನಿಗೆ ಸೇರಿದ ಸಬ್ ಅಸಿಸ್ಟೆಂಟ್ ಇಂಜಿನಿಯರ್ ಮೆಸ್ಟರ್ ಕೆ. ಪೊನ್ನಪ್ಪನವರಿಗೆ 1896ನೇ ಜುಲೈ 19ನೇ ಮಂಗಳವಾರ ಲಾಗಾಯತು ಇಪ್ಪತ್ತು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಸಿ. ಬರ್ಡ್, ಕರ್ನಲ್,
ಮೈಸೂರ್ ಗವರ್ಮೆಂಟ್ ಪಬ್ಲಿಕ್‌ವರ್ಕ್ಸ್ ಇಲಾಖಾ ಸೆಕ್ರೆಟರಿ.